ಅದನ್ನು ಕಂಡು ಗಂಗೆಗೆ ಆಶ್ಚರ್ಯವಾಯಿತು. ಇಷ್ಟು ಸುಲಭವಾಗಿ ಔಷಧಿ ತಗೊಂಡಳಲ್ಲಾ...! ನಾಳೆ ಕಹಿ ಎಲೆಯನ್ನೂ ಅಗಿದು ತಿನ್ನುವಳೆ!? ಅವಳ ಮನಸ್ಸು ಅಳೆದವಳಂತೆ ಶಿವಣ್ಣ ಹೇಳಿ ಬಿಟ್ಟ.

'ನಾಳೀಕೆ... ಮುಂಜಾನೆ ನಿಮ್ಮಲ್ಲಿ ಬರ್ತೀನಿ... ನಾನೇ, ಮೂರೂ ದಿನ ಬಂದು ಈಕೀಗೆ ಹಸಿರೆಲೆ ತಿನ್ನಸ್ತೀನಿ... ನೀ ತಿನ್ಸಾಕ ಈಕಿ ಬಿಡೂಹಂಗಿಲ್ಲ... ಚಿಂತಿ ಮಾಡಬ್ಯಾಡ. ನಾನೇ ಬಂದು ತಿನ್ನಿಸ್ತೀನಿ...' ಗಂಗ ಕೃತಜ್ಞತಾ ಪೂರ್ವಕವಾಗಿ ತಲೆ ಆಡಿಸಿದಳು.

ಈ ತುರ್ತಿನ ಸಮಯದಲ್ಲಿ ಅವಳಿಗೆ ಗಂಡನಾಗಿದ್ದವನ ಮೇಲೆ ಯಾವ ಅನುಮಾನವೂ ಸುಳಿದಿರಲಿಲ್ಲ. ಆಸ್ಪತ್ರೆ ಚಾಕುವಿನ ಹೆದರಿಕೆ ಇವನ ಮೇಲಿನ ಅನುಮಾನವನ್ನೂ ಕತ್ತರಿಸಿ ಬಿಟ್ಟಿತ್ತು.

ತನ್ನ ಗಾಡಿಖಾನೆಗೆ ಹಿಂದಿರುಗಿದ ಮೇಲೆ ಮಗುವಿಗೆ ಎರಡು ಚಮಚೆ ಹಾಲು ಬಲವಂತವಾಗಿ ಕುಡಿಸಿದ ಮೇಲೆ ಅವಳಿಗೆ ಅನುಮಾನದ ಭೂತ ತಾನೂ ಇದೀನೆಂದು ಬಂದುಬಿಟ್ಟಿತು.

'ಅಂವ, ದವ ಕೊಡತಾನೊ, ವಿಷ ತಿನ್ನಿಸಿಬಿಡ್ತಾನೋ! ಪ್ರಸಾದಪ್ಪನನ್ನ ಮರುಳು ಮಾಡಿಬಿಟ್ಟಾನೆ. 'ಕೈ ಮಸುಕು' ಮಾಡಿದಾನ ಈತ!

ದ್ಯಾವ್ರೇ... ಈಗ ಕೂಸಿಗೆ ಅವನೇನು ಮಾಡ್ಲಿಕ್ಕೆ ಹೊಂಟಾನೊ ಯಾನೊ!... ಏನು ಮಾಡ್ಲಿ...?'

ಮಾರನೇ ದಿನ ಅವನು ಬಂದ್ದಿದ ಕೂಸಿಗೆ ಎಲೆ ತಿನ್ನಿಸಿ ಅದರ ನೋವು ಮಾಯವಾಗಿಸಿದ. ಮುಂದೆ ಎಂದೂ ಅವಳ ಇಂದ್ರಾ ಗಾಂಧಿ ಗಂಟಲ ಬೇನೆಲಿ ನರಳಲೇ ಇಲ್ಲ.

ಆ ದಿನದಂದು ಗಂಗಳ ಮಗುವಿಗಾಗಿ ಆ ವಿಶಿಷ್ಟ ಸೊಪ್ಪಿಗಾಗಿ ಶಿವಣ್ಣ ಎಲ್ಲೆಲ್ಲೂ, ಮೋರಿ ಬಳಿ ಸಹ ಹುಡುಕುತ್ತಾ ಹೊರಟಿದ್ದ. ಆ ಸೊಪ್ಪು ಎಲ್ಲ ಕಡೆ ಸಿಗುವುದಾದರೂ ಅದರ ಗುರುತು ಕಂಡುಕೊಳ್ಳಲು ಅವನಿಗೆ ಮಾತ್ರ ಅರಿವಿತ್ತು. ಅವನಿಗೆ ಅದರ ಲಕ್ಷಣಗಳನ್ನು ಊರಿನಲ್ಲಿ ಒಬ್ಬ ಫಕೀರ ತೋರಿಗೊಟ್ಟಿದ್ದ. ಆ ಮನುಷ್ಯ ಹೊಲಸು ಚೌಕಳಿ ದಟ್ಟಿ ಉಟ್ಟು, ಮೇಲೊಂದು ಗಂಜಿ ಅಂಗಿ ತೊಟ್ಟು, ಪೊದೆ ಗಡ್ಡ ಬಿಟ್ಟುಕೊಂಡು ಸುತ್ತಮುತ್ತ ನಾಲ್ಕಾರು ಗ್ರಾಮಗಳಲ್ಲಿ ಅಡ್ಡಾಡುತ್ತ ಹಸಿರೆಲೆ ನಾಟಿ ಔಷಧಲಿ ಜನರ ಅನಾರೋಗ್ಯ ನೀಸಿಬಿಡುತ್ತಿದ್ದ. ಅವನಿಗೆ ಮನೆ ಇರಲಿಲ್ಲ; ಸಂಸಾರ ಇರಲಿಲ್ಲ. ಈ ಹಳ್ಳಿಗಳನ್ನು ಬಿಟ್ಟು ಬೇರೆಲ್ಲೂ ಕಾಲೂ ಇರಿಸುತ್ತಿರಲಿಲ್ಲ. ಅವನೊಬ್ಬ ವಿಚಿತ್ರ ಫಕೀರ ಹಕೀಮ. ಅವನ ಬಳಿ ಗುಣ ಹೊಂದಿದವರು ಏನಾದರೊಂದು ಹಣ ಕೊಡಲು ಬಂದರೆ! 'ನನಗೆ ಕಾಸಿನಿಂದ ಏನಾಗಬೇಕು? ಅದನ್ನು ತಿನ್ನಲೇ? ಹೊದೆಯಲೆ?' ಎಂದು ನಗುತ್ತಿದ್ದ, ಯಾರಾದರೂ ಬಟ್ಟೆ, ರೊಟ್ಟಿ ಕೊಟ್ಟರೆ ತನಗೆ ಬೇಕಾದ್ದನ್ನು ತಾನೇ ಆರಿಸಿ ಕೊಂಡು ಉಪಯೋಗಿಸಿಕೊಳ್ಳುತ್ತಿದ್ದ. ಶೇಖರಣೆ ಅವನು ಅರಿಯ. ಸಂಜೆ ಆಯಿತೆಂದರೆ ಅಲ್ಲಾನನ್ನು ಹೊಗಳುತ್ತಾ, ಸುಶ್ರಾವ್ಯವಾಗಿ ಹಾಡುತ್ತಿದ್ದ. ಕೊಳದ ಬೊಡ್ಡೆಯೋ, ದೊಡ್ಡ ಮರದ ನೆರಳೊ ಅವನ ಹಾಡಿಗೆ ತಾಣವಾಗುತ್ತಿತ್ತು. ಹಾಡುವುದು, ಕಾಯಿಲೆ ಗುಣಪಡಿಸುವುದೂ ಅವನ ನಿತ್ಯ ಕೈಂಕರ್ಯ. ಇದೆಲ್ಲ ಒಪ್ಪತಕ್ಕದ್ದು. ಆದರೆ ಅವನು ಕೊಡುವ ಔಷಧ ಸಸ್ಯಗಳ ಬಗ್ಗೆ, ಅದನ್ನು ತಯಾರು ಮಾಡುವ ಬಗ್ಗೆ ಯಾರಿಗೂ ತಿಳಿಸಿಕೊಡುತ್ತಿರಲಿಲ್ಲ. ತಿಳಿಸಿದರೆ ಅವನ ಚಿಕಿತ್ಸೆ ಫಲಕಾರಿಯಾಗುವುದಿಲ್ಲವಂತೆ. ಅವನು ಸತ್ತರೆ ಅವನೊಂದಿಗೇ ಔಷಧಿ ಕ್ರಮವೂ ಸತ್ತುಹೋಗುವ ಪರಿಸ್ಥಿತಿ ಅದಾಗಿತ್ತು. ಅವನು ಬಳಸುತ್ತಿದ್ದ ವನಸ್ಪತಿ ಹಣಕಾಸು ಏನೂ ಇರುತ್ತಿರಲಿಲ್ಲ. ಜೋಳಿಗೆ ಹಾಕಿಕೊಂಡು ಎಲ್ಲೆಲ್ಲೊ ಅಲ್ಲೇ ಸಮೀಪದ ಗುಡ್ಡ, ಹೊಲದ ಒಡ್ಡು ಹೊಂಡದ ತೀರಗಳಲ್ಲಿ ಅಲೆದಾಡುತ್ತಿದ್ದ. ಅಲ್ಲಿ ಯಾವ್ಯಾವುದೊ ಸೊಪ್ಪು ಸದೆ ಆರಿಸಿಕೊಂಡು ಜೋಪಾನವಾಗಿ ಸಂಗ್ರಹಿಸಿಕೊಳ್ಳುತ್ತಿದ್ದ. ಈ ಧನ್ವಂತರಿಗೆ ಇವುಗಳೇ ದಿವ್ಯ ಔಷಧಿ ವನಸ್ಪತಿಗಳು.

ಶಿವಣ್ಣನ ತಾಯಿಯು ತನ್ನ ಕುಟುಂಬದವರಿಗೆ ಏನಾದರೂ ಜಡ್ಡಾದರೆ ಅವನನ್ನು ಹುಡುಕಿಕೊಂಡು ಹೋಗುತ್ತಿದ್ದಳು. ಚಿಕ್ಕವನಾಗಿದ್ದ ಶಿವಣ್ಣ ತುಂಬಾ ಕಾಯಿಲೆ ಬೀಳುತ್ತಿದ್ದ. ಹಕ್ಕೀ ರೋಗ, ಧಡಾರ, ಚಳಿ ಜ್ವರ, ನಾಯಿ ಕೆಮ್ಮು... ಹೀಗೇ... ಅದನ್ನೆಲ್ಲಾ ಗುಣಪಡಿಸಿ, ಶಿವಣ್ಣನನ್ನು ಪೈಲ್ವಾನನಂತೆ ಮಾಡಿದ್ದವನು ಈ ಹಕೀಮ ಸನ್ಯಾಸಿ. ಶಿವಣ್ಣ ಚಿಕ್ಕವನಾಗಿದ್ದಾಗ ಹೆಚ್ಚಾಗಿ ಕಾಡುತ್ತಿದ್ದದ್ದು ಇದೇ ಗಂಟಲ ಗ್ರಂಥಿಗಳ ಉರಿಯೂತ. ಚಿಕ್ಕ ಹುಡುಗ, ನೋವು ನುಂಗುತ್ತಾ ಗ್ರಾಮದ ತುಂಬ ಅಡ್ಡಾಡುತ್ತಲೇ ಇರುತ್ತಿದ್ದಾಗ ಆ ನೋವಿನ್ನು ಬಿಡುಗಡೆ ಮಾಡಿದ ಹಕೀಮಜ್ಜನನ್ನು ಕಂಡರೆ ಪ್ರೀತಿಯ ಆಕರ್ಷಣೆ ಇರುತ್ತಿತ್ತು. ಹಕೀಮನ ವೇಷ, ಆ ಮಣಿಸರಗಳ ಗೊಂಚಲು, ಅವನ ಬಿಳೀಗಡ್ಡ, ಚೌಕಳಿ ದಟ್ಟಿ ದೊಗಲು 'ಗಂಜಿ' ಈ ನಾಟಕೀಯವಾದ ನಿತ್ಯ ವೇಷ ಕೂಡ ಹುಡುಗನಿಗೆ ಇಷ್ಟವಾಗುತ್ತಿತ್ತು. ಇದರೊಂದಿಗೆ ಅವನು ತನ್ನಂತ ಮಕ್ಕಳೊಂದಿಗೆ ಎಂತದ್ದೊ ತಂತೀವಾದ್ಯ ಬಾರಿಸುತ್ತ ಕುಣಿವಾಗ ಶಿವಣ್ಣನಿಗೆ ಆನಂದದಿಂದ ಪ್ರಪಂಚವೇ ಮರೆತು ಹೋಗುತ್ತಿತ್ತು. ಹಕೀಮಜ್ಜನ ಬಾಲದಂತೆ ಆಗಿಬಿಟ್ಟ ಶಿವಣ್ಣ ಅವನು ಸೊಪ್ಪು ಆರಿಸಲು ಹೊರಟಾಗಲೂ ತಾನೂ ಹಿಂಬಾಲಿಸಿ ಬಿಡುತ್ತಿದ್ದ. ಅಜ್ಜನನ್ನು ಆ ಸೊಪ್ಪುಗಳ ಬಗ್ಗೆ ಪ್ರಶ್ನೆ ಹಾಕುತ್ತಿದ್ದ. ತನ್ನ ವೈದ್ಯಕೀಯ ಗೋಪ್ಯತೆ ಒಂದು ದಿನ ಆ ಹಕೀಮ ಮರೆಯುವಂತೆ ಮಾಡಿದ್ದ ಬಾಲಕ ಶಿವಣ್ಣ. ಹೊಲದ ಬದುವಿನ ಬಳಿ ಬೆಳೆದಿದ್ದ ಅಗಸೆ ಎಲೆಯಂತಿದ್ದ ಗಿಡ ಒಂದನ್ನು ಕಿತ್ತು ಅಜ್ಜನನ್ನು ಕೇಳಿದ್ದ.

'ಅಜ್ಜಾ... ನನ್ನ ಗಂಟಲ ಬೇನೆಗೆ ಇದೇ ಔಷಧಿ ಕೊಟ್ಟಿದ್ದೀ ಅಲ್ಲಾ?'

'ಹೌಂದು...' ಎಂಬ ಉತ್ತರ ಅವನ ತಲೆಯಲ್ಲಿ ಕೊರೆದು ನಿಂತು ಬಿಟ್ಟಿತು. ಮುಂದೆ ದೊಡ್ಡವನಾದ ಮೇಲೆ ಆ ಎಲೆ ಅರೆಸಿ ತಂದುಕೊಟ್ಟು ಎಷ್ಟೋ ಮಕ್ಕಳ ಗಂಟಲ ಬೇನೆ ಗುಣಪಡಿಸಿದ್ದ. ಹಕೀಮ ಇರುವವರೆಗೆ ಅವನನ್ನೆ ಬಿಡದೆ ಅನುಸರಿಸಿ ಅದೆಷ್ಟೋ ಕಾಯಿಲೆಗಳನ್ನು ಗುಣಪಡಿಸುವ ಕ್ರಮ ಅರಿತುಬಿಟ್ಟ. ಹಕೀಮ ಸಾಯುವ ಮುಂದೆ ಅವನಿಗೆ ಗುರು ಉಪದೇಶದಂತೆ ಹೇಳಿದ ಮಾತೆಂದರೆ 'ಇದನ್ನೆಲ್ಲಾ ಯಾರಿಗೂ ಕಲಿಸಬ್ಯಾಡ. ನಿನಗೊಬ್ಬನಿಗೇ ನಾನು ಹೇಳಿಕೊಟ್ಟೀನಿ... ನೀನು ಯಾರಿಗೂ ಹೇಳಬಾರದು... ಲಾಭಕ್ಕಾಗಿ ಔಷಧಿ ಕೊಡಬ್ಯಾಡ್ದು!'

ಶಿವಣ್ಣ ತನ್ನ ವ್ಯವಸಾಯದೊಂದಿಗೆ ವೈದ್ಯ ಮಾಡುವುದನ್ನೂ ರೂಢಿಸಿ ಕೊಂಡ. ವೈದ್ಯದಿಂದಾಗಿಯೇ ಈಗ ಅವನ ಗಂಗೀ ಅವನ ಸಾಮಿಪ್ಯ ಬಂದಳು. ಮಗು ಮೇಲೆ ಅವನಿಗೆ ಪ್ರೀತಿ ಇರದಿದ್ದರೂ ಅದರ ಉಪಚಾರ ಮಾಡಿದ್ದರಿಂದ ಅವನ ಕತ್ತಲ ಎದೆಯಲ್ಲಿ ಆಸೆಯ ಕಿರಣ ಮೂಡಿಬಂದಿತು.

ಗಂಗೆ ತನ್ನ ಮಗುವನ್ನು ಎತ್ತಿಕೊಂಡು ಅತ್ತ ಹೋದ ಮೇಲೆ, ಇತ್ತಕಡೆ ತನ್ನ ಚೀಲ ತೆಗೆದುಕೊಂಡು ಕೀವಿನ ನಂಜು ತುಂಬಿಕೊಂಡ ಗಂಟಲಿನ ಚಿಕಿತ್ಸೆಗೆ ಬಳಸುವ ಹಸಿರ ಎಲೆ ಹುಡುಕುತ್ತಾ ಹೊರಟ. ದೇವಸ್ಥಾನದ ಮುಂದಿನ ಭಾಗದ ರಸ್ತೆ ಬದಿ ಉದ್ದಕ್ಕೂ ನಡೆದರೆ ಅಲ್ಲೊಂದು ಪಾಳು ಬಿದ್ದ ತೋಟವಿತ್ತು. ಅದರ ನಡುವೆ ಸಣ್ಣದೊಂದು ಕೊಳ. ಹಿಂದೆ ಅದು ತೋಟಕ್ಕೆ ನೀರು ಉಣಿಸುತ್ತಿತ್ತು. ಈಗ ಉಪಯೋಗಿಸದೆ ಹಸಿರುಗಟ್ಟಿದೆ. ಆದರೂ ಹಳೇ ಕಾಲದ ಪದ್ಧತಿ ಇಟ್ಟುಕೊಂಡಿರುವ ಪುರೋಹಿತರ ಹೆಂಗಸರಿಗೆ ಅದು 'ಮಡಿ' ನೀರು! ಕೆಲವೇ ಕೆಲವೂ ಎಂದರೆ ಒಂದಿಬ್ಬರು ಮೂಢ ಪದ್ಧತಿ ಮಡಿ ಆಚರಿಸುವ ಮಹಿಳೆಯರು ಮುಟ್ಟಾದ ನಾಲ್ಕನೇ ದಿನ ಇಲ್ಲಿ ಬಂದು ಸ್ನಾನ ಮಾಡಿ 'ಶುಚಿ'ಯಾಗುವ ಅಭ್ಯಾಸ ಇಟ್ಟುಕೊಂಡಿದ್ದಾರೆ. ಅವರು ಅಭ್ಯಾಸಕ್ಕೆ ಪ್ರತಿಭಟಿಸಿದರೂ ಅವರ ಅತ್ತೆಯರು ಅಜ್ಜಿಯರು ಕಡ್ಡಾಯವಾಗಿ ಕಳುಹಿಸುತ್ತಾರೆ. ಏಕೆಂದರೆ ಪುರೋಹಿತರಂಥವರ ಕುಟುಂಬಗಳಲ್ಲಿ ಮೈಲಿಗೆ ಕಳೆಯಲು ನದಿಯಲ್ಲೊ, ಕೊಳದಲ್ಲೋ ಮಿಂದು ಬಂದರೇ ಅಡಗೆ ಮನೆಯಲ್ಲಿ, ದೇವರ ಮನೆಯಲ್ಲಿ ಪ್ರವೇಶ ಇರುತ್ತಿತ್ತು. ಪ್ರಸಾದನ ಅಜ್ಜಿಯೂ ತಮ್ಮ ಸೊಸೆ ಎಂದರೆ ಪ್ರಸಾದನ ತಾಯಿಯನ್ನು ಕಡ್ಡಾಯವಾಗಿ ಅಲ್ಲಿ ಸ್ನಾನಕ್ಕೆ ಕಳುಹಿಸುತ್ತಿದ್ದರು. ಆಕೆ ತನ್ನ ಮೂರು ದಿನ ಮಲಗಲು ಉಪಯೋಗಿಸಿದ ಚಾಪೆ, ಮೈಲಿಗೆಯಾದ ಹೊದ್ದಿಕೆ, ಬಟ್ಟೆ ಬರೆಗಳನ್ನೆಲ್ಲಾ ಹೊತ್ತುಕೊಂಡು ಹೋಗುತ್ತಿದ್ದಾಗ, ಅವರ ಜೊತೆಗಾಗಿ ಪ್ರಸಾದ ಅವರಿಂದ ದೂರವಾಗಿ ನಡೆಯುತ್ತಾ ಹಿಂದೆ ಹಿಂದೆ ಹೋಗ ಬೇಕಾಗು ತ್ತಿತ್ತು. ತಾಯನ್ನು ಮುಟ್ಟಿಸಿಕೊಳ್ಳುವಂತಿಲ್ಲ. ಅಷ್ಟೇಕೆ? ಅವಳ ನೆರಳೂ ತನ್ನ ಮೇಲೆ ಬೀಳಬಾರದು. ಸ್ನಾನ ಮುಗಿಸಿ ಮನೆಗೆ ಬಂದು ಪೂಜೆ ಮಾಡಿದ ನಂತರವೇ ತಾನೂ ಸ್ನಾನ ಮಾಡಿ ಬಂದರೆ ಮಾತ್ರ ಮಾತೃಸ್ಪರ್ಶ ಅವನಿಗೆ ಸಿಗುತ್ತಿತ್ತು...!

## ಬೊಕೆ

ಬರದ ದಿನಗಳಲಿ
ಒಣರೊಟ್ಟೆ
ಹೂವಾಗಿ ಕಂಡಿತು
ಹೂವಿನ ಬೊಕೆಗಳ ಮಾಡಿಕೊಂಡು
ಗುಳೆ ಹೊರಟೆವು

★ ಫಾಲನೇತ್ರ ಸಜ್ಜನ



ವಿಜಯ